(ಸಾಕ್ಷಿಗೆ ದಿನಾಂಕ: 17.08.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎನ್.ಎಸ್., 21 ರಿಂದ 25 ಮತ್ತು 31ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಹಾಜರುಪಡಿಸಿದ ನಿ.ಪಿ.2 ವಂಶವೃಕ್ಷದಲ್ಲಿ ಕಾಣಿಸುವ ಪುಟ್ಟರಾಜು ಬಿನ್ ನರಸರಾಜು ಇವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಹ ಮುಂದುವರೆದು, ಸದರಿ ಹೆಣ್ಣು ಮಕ್ಕಳು ನಮ್ಮ ತಾತನ ಕುಟುಂಬಕ್ಕೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪುಟ್ಟರಾಜು ಬಿನ್ ನರಸರಾಜು ನಮ್ಮ ತಾತನ ವಂಶಸ್ಥರಾಗಿರುವುದಿಲ್ಲ ಎಂದರೆ ನನ್ನ ತಾತನ ತಂದೆಗೆ ಸಂಬಂಧಪಟ್ಟಿರುತ್ತಾರೆ ಎಂದು ನುಡಿಯುತ್ತೇನೆ. ನಿ.ಪಿ.2 ದಾಖಲೆಯಲ್ಲಿ ಕಾಣಿಸುತ್ತಿರುವ ಚೌಡಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರಳಾಗಿ ಮಾಡಿರುವುದಿಲ್ಲ ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ನನ್ನ ತಂದೆ ಗೋಪಾಲರಾಜುರವರಿಗೆ ಎರಡು ಎಕರೆ, ನಮ್ಮ ಅತ್ತೆಯಾದ ರಾಜಮ್ಮರವರಿಗೆ ಎರಡು ಎಕರೆ ಹಾಗೂ ಸಾಕಮ್ಮರವರಿಗೆ ಎರಡು ಎಕರೆ ಬರಬೇಕಾಗಿರುತ್ತದೆ. ನನ್ನ ಪ್ರಕಾರ ನನ್ನ ತಂದೆ, ನನ್ನ ಅತ್ತೆ ರಾಜಮ್ಮ ಹಾಗೂ ಸಾಕಮ್ಮರವರಿಗೆ ಹೊರತುಪಡಿಸಿ ದಾವಾ ಸ್ವತ್ತಿನಲ್ಲಿ ಬೇರೆ ಯಾರಿಗೂ ಯಾವುದೇ ತರನಾದ ಹಕ್ಕು ಇರುವುದಿಲ್ಲ, ಉಳಿಕೆ ಪಕ್ಷಗಾರರಾದ 2 ರಿಂದ 39ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಏಕೆ ಸೇರಿಸಿದ್ದೀರಾ ಎಂದರೆ ವಂಶವೃಕ್ಷದ ಆಧಾರದ ಮೇರೆಗೆ ಸೇರಿಸಲಾಗಿರುತ್ತದೆ ಎಂದು ನುಡಿಯುತ್ತೇನೆ. ಪುಟ್ಟರಾಜು ಬಿನ್ ನರಸರಾಜು ರವರ ಮಗ ಗೋವಿಂದರಾಜುರವರಿಗೆ ಎಷ್ಟು ಜನ ಮಕ್ಕಳು ಎಂದರೆ ನಾಲ್ಕು ಜನ ಮಕ್ಕಳು

ಇರಬಹುದು ಎಂದು ನುಡಿಯುತ್ತೇನೆ. ಅವರುಗಳೆಂದರೆ ರಾಮರಾಜು, ಜಯಮ್ಮ ಚೌಡಮ್ಮ ಮತ್ತು ಪಾಪರಾಜು ಆಗಿರುತ್ತಾರೆ. ಸದರಿ ಜಯಮ್ಮ ಚೌಡಮ್ಮ ಮತ್ತು ಪಾಪರಾಜುರವರು ಗೋವಿಂದರಾಜುರವರ ಮಕ್ಕಳು ಅಲ್ಲ ಎಂದರೆ ನನಗೆ ಅವರ ಸಂಪರ್ಕವಿಲ್ಲದ ಕಾರಣ ನಿಖರವಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತೇನೆ.

ಪುಟ್ಟರಾಜು ಬಿನ್ ನರಸರಾಜುರವರ ಮಗ ಕೋಟಿ ರಾಜುರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ, ನನ್ನ ತಂದೆಯ ಒಡಹುಟ್ಟಿದವರನ್ನು ಹೊರತುಪಡಿಸಿ ಬೇರೆ ಸಂಬಂಧಗಳ ಕುರಿತು ನನಗೆ ನಿಖರವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. 21 ರಿಂದ 25ನೇ ಪ್ರತಿವಾದಿಯರು ನೋಂದಾಯಿತ ಕ್ರಯಪತ್ರದ ಆಧಾರದ ಮೇರೆಗೆ ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ. ಸದರಿ ಕ್ರಯಪತ್ರ 2015ನೇ ಸಾಲಿನಲ್ಲಿ ಆಗಿರಬಹುದು. ಸದರಿ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ, ಸದರಿ ಕ್ರಯಪತ್ರದ ಕುರಿತು ವಾದಪತ್ರದಲ್ಲಿ ತಿಳಿಸಲಾಗಿದೆಯೇ ಎಂದರೆ ತಿಳಿಸಲಾಗಿರುತ್ತದೆ ಎಂದು ನುಡಿಯುತ್ತೇನೆ.

21 ರಿಂದ 25ನೇ ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರದಲ್ಲಿ ದಾವಾ ಸ್ವತ್ತು 21 ರಿಂದ 25ನೇ ಪ್ರತಿವಾದಿಯರಿಗೆ ಹೇಗೆ ಬಂದಿರುತ್ತದೆ ಎಂದು ಸದರಿಯವರು ತಿಳಿಸಿರುತ್ತಾರೆ. 2 ರಿಂದ 4ನೇ ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಓದಿ

ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ದಿನಾಂಕಃ 13/04/1981ರ ಕ್ರಯಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಅದು ಸುಳ್ಳು ದಾಖಲೆಯಾಗಿರುತ್ತದೆ ಎಂದು ನುಡಿಯುತ್ತೇನೆ. ದಿನಾಂಕಃ 13/04/1981ರಂದು ಯಾವುದೇ ದಾಖಲೆ ಆಗಿರುವುದಿಲ್ಲ, ನನಗೆ ಕನ್ನಡ ಭಾಷೆ ಓದಲು ಬರುತ್ತದೆ.

ಪಾಪರಾಜುರವರು ನನ್ನ ತಂದೆಯ ತಾತ ಎಂದರೆ ಸರಿ. ಕೋಟಿ ರಾಜುರವರು ನನ್ನ ತಂದೆಯ ಚಿಕ್ಕಪ್ಪ ಎಂದರೆ ಸರಿ. ಕೋಟಿ ರಾಜುರವರು ಹೆಂಡತಿಯ ಹೆಸರು ಶಾರದಮ್ಮ ಎಂದರೆ ಸರಿ. ಶಾರದಮ್ಮರವರು ಪುಟ್ಟರಾಜುರವರ ಮೊದಲನೇ ಮಗ ರಾಮರಾಜುರವರಿಗೆ ದಿನಾಂಕಃ 13/04/1981ರಂದು ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಸದರಿ ಕ್ರಯಪತ್ರವನ್ನು **<u>ನಿ.ಡಿ.1</u>** ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಹ ಮುಂದುವರೆದು, ಶಾರದಮ್ಮರವರ ಗಂಡನ ಜೀವಿತಾವಧಿಯಲ್ಲಿಯೇ ಶಾರದಮ್ಮರವರಿಗೆ ತಿಳುವಳಿಕೆ ನೀಡದೆ ನಿ.ಡಿ.1 ದಾಖಲೆಗೆ ಶಾರದಮ್ಮರವರ ಹೆಬ್ಬೆಟ್ಟಿನ ಗುರುತು ಪಡೆಯಲಾಗಿತ್ತು ಎಂದು ನುಡಿಯುತ್ತಾರೆ. ಈ ಬಗ್ಗೆ ನನ್ನ ತಂದೆ ನನಗೆ ಮಾಹಿತಿ ನೀಡಿರುತ್ತಾರೆ. ನಿ.ಡಿ.1 ದಾಖಲೆಗೆ ಮೋಸದಿಂದ ಶಾರದಮ್ಮರವರ ಹೆಬ್ಬೆಟ್ಟಿನ ಗುರುತನ್ನು ಪಡೆದ ವಿಚಾರ ನನಗೆ ನಂತರದಲ್ಲಿ ತಿಳಿದು ಬಂದಿರುತ್ತದೆ. ಸದರಿ ವಿಚಾರ ನನ್ನ ತಂದೆಗೆ 1983ನೇ ಸಾಲಿನಲ್ಲಿ ತಿಳಿದು ಬಂದಿರಬಹುದು. ಸದರಿ ವಿಚಾರ ನನಗೆ ಈ ದಾವೆ ದಾಖಲಿಸುವಾಗ ತಿಳಿದುಬಂದಿರುತ್ತದೆ. ನಿ.ಡಿ.1 ದಾಖಲೆ ಬಗ್ಗೆ ವಾದಪತ್ರದಲ್ಲಿ ತಿಳಿಸಲಾಗಿರುತ್ತದೆ. ನಿ.ಡಿ.1 ದಾಖಲೆಯನ್ನು ಅದು

ಮೋಸದಿಂದ ಪಡೆದ ದಾಖಲೆ ಎಂದು ನನ್ನ ತಂದೆಗೆ ತಿಳಿದುಬಂದ ನಂತರ ಸದರಿಯವರು ನಿ.ಡಿ.1 ದಾಖಲೆಯನ್ನು ಯಾವುದೇ ಸಕ್ಷಮ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ, ನಿ.ಡಿ.1 ದಾಖಲೆಯನ್ನು ಪ್ರಶ್ನಿಸಲು ನನ್ನ ತಂದೆಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿ.ಡಿ.1 ದಾಖಲೆಯನ್ನು ಈ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ, 2 ರಿಂದ 4ನೇ ಪ್ರತಿವಾದಿಯರು ನಿ.ಡಿ.1 ದಾಖಲೆಯಲ್ಲಿ ನಮೂದಿಸಿದ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನ ಸ್ವಾಧೀನವನ್ನು ಕೊಡಿಸುವಂತೆ ಈ ದಾವೆಯಲ್ಲಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ,

ನನ್ನ ತಾತನ ಹೆಸರು ರಾಮರಾಜು. ನನ್ನ ತಾತ ರಾಮರಾಜುರವರಿಗೆ ಐದು ಜನ ಮಕ್ಕಳಿರುತ್ತಾರೆ. ನನ್ನ ತಂದೆ ಗೋಪಾಲರಾಜು ಮತ್ತು ಪಾಪರಾಜು ಅಣ್ಣತಮ್ಮಂದಿರು ಆಗಿರುತ್ತಾರೆ ಎಂದರೆ ಸರಿ. ಗೋಪಾಲರಾಜು ಮತ್ತು ಪಾಪರಾಜುರವರು ಸೇರಿ ನರಸರಾಜು ಬಿನ್ ಪುಟ್ಟರಾಜುರವರಿಗೆ ದಿನಾಂಕಃ 18/01/1992ರಂದು ಕ್ರಯಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಸ್ವತಹ ಮುಂದುವರೆದು ಅದು ಸೃಷ್ಟಿಸಿದ ದಾಖಲೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ಕುರಿತು ನನಗೆ ಸುಮಾರು ಎರಡು ತಿಂಗಳ ಹಿಂದೆ ತಿಳಿದು ಬಂದಿರುತ್ತದೆ. ದಿನಾಂಕಃ 18/01/1992ರಂದು ಕ್ರಯಪತ್ರದ ಬಗ್ಗೆ ನನ್ನ ತಂದೆಗೆ ತಿಳಿದಿತ್ತಾ ಎಂದರೆ ಗೊತ್ತಿರಬಹುದು ಎಂದು ನುಡಿಯುತ್ತೇನೆ. ಸದರಿ ವಿಚಾರವನ್ನು ನನ್ನ ತಂದೆ ನನಗೆ ತಿಳಿಸಿರುವುದಿಲ್ಲ, ದಿನಾಂಕಃ 18/01/1992 ದಾಖಲೆ ಪ್ರಕಾರ 21 ರಿಂದ 25ನೇ ಪ್ರತಿವಾದಿಯರು ಸ್ವತ್ತಿನ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸೃಷ್ಟಿಸಿದ ದಾಖಲೆಯ ಆಧಾರದ ಮೇರೆಗೆ

ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತೇನೆ. ಸದರಿ ಪಹಣಿಗಳನ್ನು ಸಕ್ಷಮ ಪ್ರಾಧಿಕಾರದ ಸಮಕ್ಷಮ ಪ್ರಶ್ನಿಸಿದ್ದೀರಾ ಎಂದರೆ ಈ ಸಂಬಂಧ ಪ್ರಸ್ತುತ ದಾವೆಯನ್ನು ದಾಖಲಿಸಲಾಗಿರುತ್ತದೆ ಎಂದು ನುಡಿಯುತ್ತೇನೆ. ಮೇಲಿನಂತೆ ಪಹಣಿ ಆದ ಬಗ್ಗೆ ತಿಳಿದುಬಂದ ಕೂಡಲೇ ಈ ದಾವೆಯನ್ನು ದಾಖಲಿಸಲಾಗಿರುತ್ತದೆ. ದಿನಾಂಕಃ 18/01/1992 ದಾಖಲೆ ಬಗ್ಗೆ ಹೇಗೆ ತಿಳಿದು ಬಂದಿರುತ್ತದೆ ಎಂದರೆ ಊರಿನ ಜನರ ಮೂಲಕ ಗೊತ್ತಾಗಿರುತ್ತದೆ ಎಂದು ನುಡಿಯುತ್ತೇನೆ. ಸದರಿ ದಾಖಲೆ ಬಗ್ಗೆ ನನ್ನ ತಂದೆಗೆ ಈ ದಾವೆ ದಾಖಲಿಸುವ ಸುಮಾರು ಮೂರು ತಿಂಗಳ ಪೂರ್ವದಲ್ಲಿ ತಿಳಿದುಬಂದಿರುತ್ತದೆ. ನಮ್ಮ ವಾದ ಪತ್ರದಲ್ಲಿ ದಿನಾಂಕಃ 18/01/1992ರ ಕ್ರಯ ಪತ್ರ ಸೃಷ್ಟಿಸಿದ ಬಗ್ಗೆ ಹೇಳಲಾಗಿದೆಯೇ ಎಂದರೆ ಹೇಳಿರುವುದಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು ಆ ಬಗ್ಗೆ ಗೊತ್ತಿರದ ಕಾರಣ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 18/01/1992ರ ಕ್ರಯ ಪತ್ರವನ್ನು ಈ ದಾವೆಯಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತೇನೆ.

***ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

***ಸಹಿ/-***
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.